ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್-585226

ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ, (ದ.ಕ.)




# ಕೃಷಿ ಸಂಜೀವಿನಿ




ದೂರವಾಣಿ ಸಂಖ್ಯೆ: 0824: 2431872, 8762543060

e-mail: kvk.DakshinaKannada@icar.gov.in, kvkdk@rediffmail.com, kvkdkmlr@gmail.com, Web: kvkdk.org

ಸಂಚಿಕೆ: 01 | ಜನವರಿ-ಜೂನ್-2022 ಇ-ವಾರ್ತಾ ಪತ್ರಿಕೆ | ಸಂಪುಟ-1

## 12ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ

ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡದ 12ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ಡಾ. ಎನ್.ಎ. ಪಾಟೀಲ್, ವಿಸ್ತರಣಾ ನಿರ್ದೇಶಕರು, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 31.01.2022 ರಂದು ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರಿನಲ್ಲಿ ನಡೆಸಲಾಯಿತು. ಡಾ. ವಿ. ವೆಂಕಟಸುಬ್ರಮಣಿಯನ್, ನಿರ್ದೇಶಕರು, ಭಾ.ಕೃ.ಅ.ಪ. ಅಟಾರಿ, ಬೆಂಗಳೂರು, ಡಾ. ಬಿ. ಹೇಮ್ಲಾ ನಾಯ್ಕ್, ವಿಸ್ತರಣಾ ನಿರ್ದೇಶಕರು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ಡಾ. ಟಿ.ಎನ್. ರವಿಪ್ರಸಾದ್, ನಿರ್ದೇಶಕರು, ಗೇರು ಸಂಶೋಧನಾ ಕೇಂದ್ರ ಪುತ್ತೂರು, ಡಾ. ಪ್ರತಿಭಾ ರೋಹಿತ್, ಮುಖ್ಯಸ್ಥರು ಭಾ.ಕೃ.ಅ.ಪ. ಸಿ.ಎಂ.ಎಫ್.ಆರ್.ಐ. ಪ್ರಧಾನ ಸಂಸ್ಥೆ ಮಂಗಳೂರು, ಡಾ. ಪ್ರಸನ್ನಕುಮಾರ್ ಟಿ.ಜಿ., ಉಪನಿರ್ದೇಶಕರು, ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮಂಗಳೂರು, ಡಾ. ಹೆಚ್.ಆರ್. ನಾಯ್ಕ, ತೋಟಗಾರಿಕಾ ಉಪನಿರ್ದೇಶರು, ಜಿ.ಪಂ. ದ.ಕ. ಮಂಗಳೂರು., ಡಾ. ರವಿರಾಜ ಶೆಟ್ಟಿ, ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರ, ಉಳ್ಳಾಲ, ಡಾ. ಧನಂಜಯ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೆ.ವಿ.ಕೆ. ಬ್ರಹ್ಮಾವರ ಉಡುಪಿ, ಶ್ರೀ ಮಣಿಕಂದನ್, ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ, ಕಾಸರಗೋಡು, ಶ್ರೀಮತಿ ಪ್ರೇಮಾ ಕಾಂಬ್ಲೆ, ಸಹಾಯಕ ಕೃಷಿ ನಿರ್ದೇಶಕರು, (ಕೇಂದ್ರ) ಮಂಗಳೂರು, ಶ್ರೀಮತಿ ಮಂಜುಶ್ರೀ ಶೆಣೈ, ಸಹಾಯಕ ನಿರ್ದೇಶಕರು, ಮೀನುಗಾರಿಕಾ ಇಲಾಖೆ, ಮಂಗಳೂರು, ವೈಜ್ಞಾನಿಕ ಸಲಹಾ ಸಮಿತಿ ಸದ್ಯಸ್ಯರು, ಪ್ರಗತಿಪರ ರೈತರು, ಹಾಗೂ ಇತರೆ ಅಭಿವೃದ್ಧಿ ಇಲಾಖಾ ಅಧಿಕಾರಿಗಳು ಮತ್ತು ಸ್ವಸಹಾಯ ಗುಂಪಿನ ಸದಸ್ಯರು ಉಪಸ್ಥಿತಿಯಲ್ಲಿದ್ದರು.

ಡಾ. ಟಿ.ಜೆ. ರಮೇಶ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಇವರು ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರನ್ನು ಸ್ವಾಗತಿಸಿದರು ಮತ್ತು 11 ನೇ ವೈಜ್ಞಾನಿಕ ಸಲಹಾ ಸಮಿತಿಯ ಸಭೆಯ ನಡಾವಳಿಗಳಿಗೆ ಕೈಗೊಂಡ ವರದಿಯನ್ನು ಮಂಡಿಸಿದರು. ನಂತರ 2021-22ನೇ ಸಾಲಿನಲ್ಲಿ ಕೈಗೊಂಡ ತಂತ್ರಜ್ಞಾನ ಪರಿಶೀಲನೆ, ಮುಂಚೂಣಿ ಪ್ರಾತ್ಯಕ್ಷಿಕೆಗಳು, ತರಬೇತಿಗಳು ಮತ್ತು ಇತರೆ ವಿಸ್ತರಣಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಡೆಸಲಾದ ಚಟುವಟಿಕೆಗಳು ಮತ್ತು ಪ್ರಾಯೋಜಿತ ಕಾರ್ಯಕ್ರಮಗಳನ್ನು ಸಹ ಪ್ರಸ್ತುತಪಡಿಸಲಾಯಿತು.

ಡಾ. ಎನ್.ಎ. ಪಾಟೀಲ್, ವಿಸ್ತರಣಾ ನಿರ್ದೇಶಕರು, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರು ತಳಿ ಉದ್ದೇಶಕ್ಕಾಗಿ ಮುಧೋಳ ನಾಯಿಮರಿಗಳ ಲಭ್ಯತೆ, ನಿರ್ವಹಣೆ ಮತ್ತು ಹೊಸ ಹಂದಿ ಸಾಕಾಣಿಕೆ ಘಟಕವನ್ನು ಪ್ರಾರಂಭಿಸಲು ಮತ್ತು ಮಣ್ಣು ಮತ್ತು ಮೇವಿನ ಮ್ಯಾಪಿಂಗ್ ಮುಖಾಂತರ ಪ್ರದೇಶ ನಿರ್ದಿಷ್ಟ ಖನಿಜ ಮಿಶ್ರಣದ ಕಾರ್ಯಕ್ರಮಗಳನ್ನು ಆಯೋಜಿಸಲು ಭರವಸೆ ನೀಡಿದರು.

ಡಾ. ಬಿ. ಹೇಮ್ಲಾ ನಾಯ್ಕ್, ವಿಸ್ತರಣಾ ನಿರ್ದೇಶಕರು, ಕೆಳದಿ ಶಿವಪ್ಪ ನಾಯಕ, ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ಇವರು ತೋಟದಲ್ಲಿ ಬೆಳೆಸಬಹುದಾದ ಗಿಡಮೂಲಿಕಾ ಸಸ್ಯಗಳು, ಮಣ್ಣಿನ ಸಂವೃದ್ಧಿ ಆಧಾರಿತ ಕಾರ್ಯಕ್ರಮ, ನೈಸರ್ಗಿಕ ಕೃಷಿ ಮತ್ತು ಸಮಗ್ರ ಕೃಷಿ ವ್ಯವಸ್ಥೆಯ ವಿನ್ಯಾಸಗಳನ್ನು ಅಭಿವೃದ್ಧಿಪಡಿಸಲು ಸೂಚಿಸಿದರು.

ಡಾ. ವಿ. ವೆಂಕಟಸುಬ್ರಮಣಿಯನ್, ನಿರ್ದೇಶಕರು, ಭಾ.ಕೃ.ಅ.ಪ. ಅಟಾರಿ, ಬೆಂಗಳೂರು ಇವರು ಸ್ಥಳೀಯ ತಳಿಗಳನ್ನು ಸಂರಕ್ಷಿಸುವುದು ಮತ್ತು ಅವುಗಳನ್ನು ಕೃಷಿ ಸಮುದಾಯಕ್ಕೆ ಲಭ್ಯವಾಗುವಂತೆ ಮತ್ತು ರೈತರಿಗೆ ಕೃಷಿ ತ್ಯಾಜ್ಯದಿಂದ ಸಂಪತ್ತಿಗೆ ಮತ್ತು ನಗರ ಆಧಾರಿತ ಪೌಷ್ಟಿಕ ಕೈತೋಟ ನಿರ್ಮಾಣ ಸ್ಥಾಪನೆ ಮಾಡುವಂತೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಸಾವಯವ ಕೃಷಿ ಮತ್ತು ವೈಜ್ಞಾನಿಕ ಮೀನು ಸಾಕಾಣಿಕೆ ಎಂಬ ಪುಸ್ತಕವನ್ನು ಗಣ್ಯರು ಬಿಡುಗಡೆ ಮಾಡಿದರು.







ಈ ಸಂದರ್ಭದಲ್ಲಿ ಕರ್ನಾಟಕ ಕರಾವಳಿ ಜಿಲ್ಲೆಯಿಂದ ಪದ್ಮಶ್ರೀ ಪ್ರಶಸ್ತಿಗೆ ಬಾಜೀನರಾದ ಶ್ರೀ ಅಮೈ ಮಹಾಲಿಂಗ ನಾಯ್ಕ, ಇವರಿಗೆ ಡಾ. ವಿ. ವೆಂಕಟಸುಬ್ರಮಣಿಯನ್, ನಿರ್ದೇಶಕರು, ಭಾ.ಕೃ.ಅ.ಪ. ಅಟಾರಿ, ಬೆಂಗಳೂರು, ಇವರ ಮಾರ್ಗದರ್ಶನದಂತೆ ಡಾ. ಎನ್.ಎ. ಪಾಟೀಲ್, ವಿಸ್ತರಣಾ ನಿರ್ದೇಶಕರು, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರ ಅಧ್ಯಕ್ಷತೆಯಲ್ಲಿ ಶ್ರೀ ಅಮೈ ಮಹಾಲಿಂಗ ನಾಯ್ಕ, ಇವರಿಗೆ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಸನ್ಮಾನಿಸಲಾಯಿತು.



## ವಿಶ್ವ ಬೇಳೆಕಾಳುಗಳ ದಿವಸ-2022 ಆಚರಣೆ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಮಂಗಳೂರು ಇಲ್ಲಿ ದಿನಾಂಕ 22.02.2022 ರಂದು ವಿಶ್ವ ಬೇಳೆಕಾಳುಗಳ ದಿವಸ –2022 ಪ್ರಯುಕ್ತ ಬೇಳೆಕಾಳುಗಳ ಮಹತ್ವದ ಬಗ್ಗೆ ಅರಿವು ಮೂಡಿಸುವ ಅಂಗವಾಗಿ ಅಂಗನವಾಡಿ ಸಹಾಯಕರಿಗೆ, ರೈತರಿಗೆ ಮತ್ತು ಸ್ವಸಹಾಯ ಗುಂಪುಗಳಿಗೆ ಬೇಳೆಕಾಳುಗಳ ಮೌಲ್ಯವರ್ಧನೆಯ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ, ಪದ್ಧತಿ ಪ್ರಾತ್ಯಕ್ಷಿಕೆಗಳು ಮತ್ತು ಬೇಳೆಕಾಳುಗಳಿಗೆ ಸಂಬಂಧಿಸಿದ ವಸ್ತು ಪ್ರದರ್ಶನ ನಡೆಸುವ ಮೂಲಕ ವಿಶ್ವ ಬೇಳೆಕಾಳುಗಳ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಡಾ. ಎ. ಫಜಲ್, ಆಹಾರ ವಿಜ್ಞಾನಿ, ನಿವೃತ್ತ ಪ್ರಾಧ್ಯಾಪಕ ಹಾಗೂ ಪಿ.ಎಂ.ಎಫ್.ಎಂ.ಇ ಯೋಜನೆಯ ಜಿಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಅವರು ಮಾನವನ ಆಹಾರದಲ್ಲಿ ಬೇಳೆಕಾಳುಗಳ ಮಹತ್ವ, ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಪಿ.ಎಂ.ಎಫ್.ಎಂ.ಇ. ಯೋಜನೆಯಡಿ ಲಭ್ಯವಿರುವ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಶ್ರೀಮತಿ ನಳಿನಿ, ಮಹಿಳಾ ಉದ್ಯಮಿ ಇವರು ಇಡ್ಲಿ, ದೋಸೆ, ಪಡ್ಡು, ಪಾಪಡ್, ಸಿಹಿತಿಂಡಿಗಳು, ಪದೆಂಜಿ ಮುಂತಾದ ಬೇಳೆಕಾಳುಗಳ ಉತ್ಪನ್ನಗಳ ತಯಾರಿಕೆ ಕುರಿತು ಪ್ರಾತ್ಯಕ್ಷಿಕೆ ನೀಡಿದರು. ಡಾ. ನವೀನ್ ಕುಮಾರ್ ಬಿ.ಟಿ. ವಿಜ್ಞಾನಿಗಳು (ಬೇಸಾಯ ಶಾಸ್ತ್ರ) ಕೆ.ವಿ.ಕೆ. ದ.ಕ. ಇವರು ಕರಾವಳಿಯಲ್ಲಿ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ದ್ವಿದಳ ಧಾನ್ಯಗಳ ಉತ್ಪಾದನಾ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಿದರು.

ಡಾ. ಟಿ.ಜೆ. ರಮೇಶ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು ಇವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಕೃಷಿ ಉತ್ಪಾದಕತೆ ಮತ್ತು ಲಾಭದಾಯಕತೆಯನ್ನು ಹೆಚ್ಚಿಸಲು ದ್ವಿದಳ ದಾನ್ಯಗಳ ಬೆಳೆ ಪದ್ಧತಿಯತ್ತ ಸಾಗುವಂತೆ ರೈತರಿಗೆ ತಿಳಿಸಿದರು. ಶ್ರೀಮತಿ ನಳಿನಿ, ಮಹಿಳಾ ಉದ್ಯಮಿ ಇವರು ತಯಾರಿಸಿದ ಬೇಳೆಕಾಳುಗಳ ವಿವಿಧ ಉತ್ಪನ್ನಗಳನ್ನು ಪ್ರದರ್ಶಿಸಲು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಹೆಸರು ಬೆಳೆಯ (ಬಿ.ಜಿ.ಎಸ್.–9 ತಳಿ) ಪ್ರಾತ್ಯಕ್ಷಿಕಾ ತಾಕಿಗೆ 42 ಜನ ಶಿಬಿರಾರ್ಥಿಗಳೊಂದಿಗೆ ಭೇಟಿ ನೀಡಲಾಯಿತು ಮತ್ತು ಪದೆಂಜಿ (ಹಸಿರು ಬೇಳೆಯಿಂದ ತಯಾರಿಸಿದ ಸ್ಥಳೀಯ ಪೋಷಕಾಂಶಭರಿತ ಖಾದ್ಯ) ವಿತರಿಸುವ ಮೂಲಕ ಕಾರ್ಯಕ್ರಮವನ್ನು ಕೊನೆಗೊಳಿಸಲಾಯಿತು.









## ತೆಂಗಿನಲ್ಲಿ ವೈಜ್ಞಾನಿಕ ಕೃಷಿ ಮತ್ತು ಮೌಲ್ಯವರ್ಧನೆ ಕುರಿತು ತಾಲೂಕು ಮಟ್ಟದ ವಿಚಾರ ಸಂಕಿರಣ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ಮತ್ತು ತೆಂಗು ಅಭಿವೃದ್ಧಿ ಮಂಡಳಿ ಇವರ ಸಹಭಾಗಿತ್ವದಲ್ಲಿ ದಿನಾಂಕ 17.02.2022ರಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಸುಳ್ಯದ ಸಭಾಂಗಣದಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಶ್ರೀ ಅರವಾಯಿ ಈ., ನಿರ್ದೇಶಕರು, ತೆಂಗು ಅಭಿವೃದ್ಧಿ ಮಂಡಳಿ (ಬೆಂಗಳೂರು) ಇವರು ಉದ್ಘಾಟಿಸಿದರು. ಡಾ ಟಿ.ಜೆ. ರಮೇಶ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು ಇವರು ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಸಿ.ಪಿ.ಸಿ.ಆರ್.ಐ. ಸಂಸ್ಥೆಯ ಡಾ. ಕೆ.ವಿ. ಹೆಬ್ಬಾರ್ (ಪ್ರಧಾನ ವಿಜ್ಞಾನಿಗಳು) ಮತ್ತು ಡಾ. ಎನ್.ಆರ್. ನಾಗರಾಜು (ವಿಜ್ಞಾನಿಗಳು) ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಡಾ. ಕೇದಾರನಾಥ ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ಕೆ.ವಿ.ಕೆ. ಮಂಗಳೂರು ಇವರು ಆಯೋಜಿಸಿದ್ದರು. ಒಟ್ಟು 69 ರೈತರು ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.





## ತೆಂಗು ಬೆಳೆಯ ವೈಜ್ಞಾನಿಕ ಕೃಷಿ ಪದ್ಧತಿಗಳ ಕುರಿತು ಕ್ಷೇತ್ರೋತ್ಸವ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ಮತ್ತು ತೆಂಗು ಅಭಿವೃದ್ಧಿ ಮಂಡಳಿ (ಬೆಂಗಳೂರು) ಇವರ ಸಹಭಾಗಿತ್ವದಲ್ಲಿ ದಿನಾಂಕ: 19.02.2022 ರಂದು ತೆಂಗು ಬೆಳೆಯಲ್ಲಿ ವೈಜ್ಞಾನಿಕ ಕೃಷಿಯ ಕುರಿತು ಕ್ಷೇತ್ರೋತ್ಸವನ್ನು ದರೆಗುಡ್ಡೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ. ಕೇದಾರನಾಥ, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ಮತ್ತು ಡಾ. ಮಲ್ಲಿಕಾರ್ಜುನ ಎಲ್. ವಿಜ್ಞಾನಿಗಳು (ಮಣ್ಣು ವಿಜ್ಞಾನ) ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಹಾಗೂ ಶ್ರೀ ಮನೋಹರ ಶೆಟ್ಟಿ, ಕಾರ್ಯದರ್ಶಿಗಳು (ರಾಜ್ಯ ರೈತ ಸಂಘ) ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ಕೇದಾರನಾಥ ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ಕೆ.ವಿ.ಕೆ. ಮಂಗಳೂರು ಇವರು ಆಯೋಜಿಸಿದ್ದರು. ಒಟ್ಟು 31 ರೈತರು ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.











## ದೇಸಿ ತರಬೇತಿಯ ಉದ್ಘಾಟನೆ ಮತ್ತು ದೃಷ್ಟಿಕೋನ ಕಾರ್ಯಕ್ರಮ

ಕೃಷಿಯಲ್ಲಿ ನಿರಂತರ ಬೆಳವಣಿಗೆಯನ್ನು ಸಾಧಿಸಲು ಕೃಷಿ ಸಮುದಾಯಗಳಲ್ಲಿ ಅಗತ್ಯ ಆಧಾರಿತ ಕೃಷಿ ತಂತ್ರಜ್ಞಾನವನ್ನು ಸಮಯೋಚಿತವಾಗಿ ಪ್ರಸಾರ ಮಾಡುವ ಸಾಮರ್ಥ್ಯ ವಿಸ್ತರಣಾ ವ್ಯವಸ್ಥೆಯು ಅಗತ್ಯವಾಗದೆ. ಕೃಷಿ ಪರಿಕರ ಮಾರಾಟಗಾರರು ಕೃಷಿ ಸಮುದಾಯಕ್ಕೆ ಅಗತ್ಯವಿರುವ ಪರಿಕರಗಳನ್ನು ನೀಡುವುದರ ಜೊತೆಗೆ ಕೃಷಿಗೆ ಪೂರಕ ತಾಂತ್ರಿಕ ಮಾಹಿತಿಯನ್ನು ನೀಡುವ ದ್ವಿಪಾತ್ರವನ್ನು ನಿರ್ವಹಿಸುವ ಮೂಲಕ ರೈತರನ್ನು ತಲುಪುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಭಾ.ಕೃ.ಅ.ಪ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡವು ಮ್ಯಾನೇಜ್ ಹೈದರಾಬಾದ್, ಸಮೇತಿ (ದಕ್ಷಿಣ), ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೃಷಿ ಇಲಾಖೆ, ದಕ್ಷಿಣ ಕನ್ನಡ ಇದರ ಸಹಯೋಗದಲ್ಲಿ ದಿನಾಂಕ 29.03.2022 ರಂದು ಕೃಷಿ ವಿಜ್ಞಾನ ಕೇಂದ್ರ ಮಂಗಳೂರಿನಲ್ಲಿ ದೇಸಿ ತರಬೇತಿಯ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾ. ಕೇದಾರನಾಥ, ವಿಜ್ಞಾನಿ(ಸಸ್ಯ ಸಂರಕ್ಷಣೆ) ಮತ್ತು ಸಂಯೋಜಕರು (ದೇಸಿ ತಂಡ–5) ಎಲ್ಲಾ ಅತಿಥಿಗಳನ್ನು ಹಾಗೂ ಕೃಷಿ ಪರಿಕರ ಮಾರಾಟಗಾರರನ್ನು ಸ್ವಾಗತಿಸಿದರು ಮತ್ತು ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ವಿವರಿಸಿದರು.

ಕಾರ್ಯಕ್ರಮವನ್ನು ಡಾ. ಶಿವಪ್ರಕಾಶ್ ಎಸ್.ಎಂ. ನಿವೃತ್ತ ವಿಸ್ತರಣಾ ನಿರ್ದೇಶಕರು, ಕ.ಪ.ಪ.ಮಿ.ವಿ.ವಿ, ಬೀದರ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಸೀತಾ, ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾ ಪಂಚಾಯತ್, ದ.ಕ. ಮತ್ತು ಡಾ. ಶಿವಕುಮಾರ್ ಎಂ. ಡೀನ್, ಮೀನುಗಾರಿಕಾ ಕಾಲೇಜು, ಮಂಗಳೂರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಟಿ.ಜೆ. ರಮೇಶ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು ಇವರು ಭಾಗವಹಿಸಿದ ಶಿಬಿರಾರ್ಥಿಗಳಿಗೆ ತಂತ್ರಜ್ಞಾನಗಳನ್ನು ಕಲಿಯಲು ಮತ್ತು ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಲು ಸಲಹೆ ನೀಡಿದರು. ಜಿಲ್ಲೆಯ ಒಟ್ಟು 40 ಕೃಷಿ ಪರಿಕರ ಮಾರಾಟಗಾರರು ಕಾರ್ಯಕ್ರಮದಲ್ಲಿ ಭಾವಹಿಸಿದ್ದರು.



## ಕೃಷಿ ವಿಜ್ಞಾನ ಕೇಂದ್ರದಲ್ಲಿ ಪೌಷ್ಠಿಕ ಕೈತೋಟ ತರಬೇತಿ ಕಾರ್ಯಕ್ರಮ

ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಅಂಗ ಸಂಸ್ಥೆಯಾದ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ. ಮಂಗಳೂರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಗಳೂರು ಇವರ ಸಹಭಾಗಿತ್ವದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ಪೌಷ್ಠಿಕ ಕೈತೋಟ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 08–03–2022 ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ. ಸುಮಂಗಳ ರಾವ್, ಉಪ ಮೇಯರ್, ಮಂಗಳೂರು ಮಹಾನಗರ ಪಾಲಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರ ಹಾಗೂ ಮಂಗಳೂರು ರಾಸಾಯನಿಕ ಮತ್ತು ರಸಗೊಬ್ಬರ ಕಾರ್ಖಾನೆಯ ವತಿಯಿಂದ ಪ್ರಗತಿಪರ ರೈತ ಮಹಿಳೆಯರಾದ ಶ್ರೀಮತಿ. ಶಶಿಕಲಾ ಶ್ರೀಮತಿ. ಜಾಸ್ಮೀನ್ ಮರೀಯಾ ಆರ್ನ್ನಾನ, ಶ್ರೀಮತಿ. ಸೆಲೀನಾ ಮತ್ತು ಶ್ರೀಮತಿ. ಶಿಲ್ಪರವರಿಗೆ ಗೌರವಪೂರ್ವ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಟಿ. ಜೆ. ರಮೇಶರವರು ಮಹಿಳೆಯರಿಗೆ ಗೌರವದ ಸ್ಥಾನಮಾನ ನೀಡಬೇಕೆಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಉತ್ತಮ ಸಮಾಜ ಕಟ್ಟಲು ಮಹಿಳೆಯರ ಪಾತ್ರ ತುಂಬಾ ಮಹತ್ವವಾದುದು ಎಂದು ಶ್ರೀ. ಭರತ್ ಕುಮಾರ್, ಕಾರ್ಪೊರೇಟರ್ ಸೂಟರ್‌ಪೇಟ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಶ್ರೀ. ಬ್ಲಾನಿ ಡಿಸೋಜಾ, ಸಲಹೆಗಾರರು, ತಾರಸಿ ತೋಟಗಾರಿಕೆ ಮತ್ತು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಕೈತೋಟದ ಪ್ರಾಮುಖ್ಯತೆಯನ್ನು ಕಾರ್ಯಕರ್ತೆಯರಿಗೆ ತಿಳಿಸಿಕೊಟ್ಟರು. ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದ ಮೀನುಗಾರಿಕೆ ವಿಜ್ಞಾನಿಯಾದ ಡಾ. ಎನ್. ಚೇತನ್‌ರವರು ಸ್ವಾಗತಿಸಿ, ಡಾ. ಕೇದಾರನಾಥ ವಂದಿಸಿದರು. ಕಾರ್ಯಕ್ರಮದಲ್ಲಿ 52 ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಮತ್ತು ಸ್ತ್ರೀ ಸಂಘದ ಮಹಿಳೆಯರು, ಮಂಗಳೂರು ರಾಸಾಯನಿಕ ಮತ್ತು ರಸಗೊಬ್ಬರ ಕಾರ್ಖಾನೆಯ ಮಾರುಕಟ್ಟೆ ವ್ಯವಸ್ಥಾಪಕರಾದಂತ ಶ್ರೀ. ಮಧೂ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿಗಳು ಭಾಗವಹಿಸಿದ್ದರು.





## ವೈಜ್ಞಾನಿಕ ತೆಂಗು ಕೃಷಿಯ ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ

ಭಾ. ಕೃ. ಅ. ಪ. –ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ಮತ್ತು ತೆಂಗು ಅಭಿವೃದ್ಧಿ ಮಂಡಳಿ ಇವರ ಸಹಭಾಗಿತ್ವದಲ್ಲಿ ದಿನಾಂಕ 30–04–2022 ರಂದು ಕೃಷಿ ವಿಜ್ಞಾನ ಕೇಂದ್ರ ಸಭಾಂಗಣದಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಶ್ರೀ. ಹೆಚ್. ಆರ್. ನಾಯಕ್ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಇವರು ಉದ್ಘಾಟಿಸಿದರು. ಡಾ ಟಿ.ಜೆ. ರಮೇಶ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು ಇವರು ಅಧ್ಯಕ್ಷತೆ ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ರವಿ ಭಟ್, ಪ್ರಧಾನ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಬೇಸಾಯ ಶಾಸ್ತ್ರ ವಿಭಾಗ ಭಾ. ಕೃ. ಅ. ಪ.– ಸಿ. ಪಿ. ಸಿ. ಆರ್. ಐ, ಕಾಸರಗೋಡು ಇವರು ವೈಜ್ಞಾನಿಕ ತೆಂಗು ಕೃಷಿ ಮತ್ತು ಮೌಲ್ಯವರ್ಧಿತ ತೆಂಗು ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಿದರು. ಡಾ. ವಿನಾಯಕ ಹೆಗಡೆ, ಪ್ರಧಾನ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಸಸ್ಯ ಸಂರಕ್ಷಣೆ ವಿಭಾಗ ಭಾ. ಕೃ. ಅ. ಪ.–ಸಿ. ಪಿ. ಸಿ. ಆರ್. ಐ, ಕಾಸರಗೋಡು ರವರು ತೆಂಗು ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ ಬಗ್ಗೆ ವಿವರಣೆ ನೀಡಿದರು, ತೆಂಗು ಅಭಿವೃದ್ಧಿ ಮಂಡಳಿಯಿಂದ ರೈತರಿಗೆ ಸಿಗುವ ಸವಲತ್ತುಗಳ ಬಗ್ಗೆ ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಡಾ. ರಶ್ಮಿ ಆರ್. ರವರು ಮಾಹಿತಿ ನೀಡಿದರು ಮತ್ತು ಶ್ರೀ. ಸತ್ಯನಾರಾಯಣ ಉಡುಪ, ವ್ಯವಸ್ಥಾಪಕ ನಿರ್ದೇಶಕರು, ಉಡುಪಿ ಕಲ್ಪರಸ ತೆಂಗು ಮತ್ತು ಆಲ್ ಸ್ಪೈಸ್ ಉತ್ಪಾದಕ ಕಂಪನಿ ನಿಯಮಿತ, ಕುಂದಾಪುರ ರವರು ಕಲ್ಪರಸ (ನೀರಾ) ಆರೋಗ್ಯ ವರ್ಧಕ ಪಾನೀಯ ತಾಂತ್ರಿಕತೆಯನ್ನು ತಿಳಿಸಿದರು. ಡಾ. ರಶ್ಮಿ ಆರ್. ತೋಟಗಾರಿಕೆ ವಿಜ್ಞಾನಿ, ಕೆ.ವಿ.ಕೆ. ಮಂಗಳೂರು ಇವರು ಆಯೋಜಿಸಿದ್ದರು. ಒಟ್ಟು 103 ರೈತರು ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.





## ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಕಾರ್ಯಕ್ರಮ

ಕೇಂದ್ರ ಸರ್ಕಾರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ ಹಾಗೂ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ ನವದೆಹಲಿ ಇವರ ಪ್ರಾಯೋಜಕತ್ವದ "ಲಾಭದಾಯಕ ಹೈನುಗಾರಿಕೆ ಮತ್ತು ಜಾನುವಾರುಗಳ ನಿರ್ವಹಣೆ ಬಗ್ಗೆ ತರಬೇತಿಗಳ ಮೂಲಕ ರೈತರ ಸಾಮರ್ಥ್ಯ ಅಭಿವೃದ್ಧಿಪಡಿಸುವ ಯೋಜನೆ" ಅಡಿಯಲ್ಲಿ ದಿನಾಂಕ 21.03.2022 ರಿಂದ 23.03.2022ರ ವರೆಗೆ ಮೂರು ದಿನಗಳ "ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ" ತರಬೇತಿ ಕಾರ್ಯಕ್ರಮವನ್ನು ಬೆಟ್ಟಂಪಾಡಿ ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು.

ಡಾ. ಶಿವಕುಮಾರ್ ಆರ್. ಸಹಾಯಕ ಪ್ರಾಧ್ಯಾಪಕರು ಇವರು ಕಾರ್ಯಕ್ರಮದ ಸಂಯೋಜಕರಾಗಿದ್ದರು, ಶ್ರೀ ವಿನೋದ್ ಕುಮಾರ್, ಉಪಾಧ್ಯಕ್ಷರು ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಇವರು ಸದರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಟಿ.ಜೆ. ರಮೇಶ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದು, ತಮ್ಮ ಅಧ್ಯಕ್ಷಿಯ ಭಾಷಣದಲ್ಲಿ ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆಯ ಮಹತ್ವವನ್ನು ತಿಳಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಪಶುಸಂಗೋಪನೆ ಅಧಿಕಾರಿಗಳು ಹಾಗೂ ಕೃಷಿ ತಜ್ಞರು ತರಬೇತುದಾರರಾಗಿ ಭಾಗವಹಿಸಿದ್ದರು. ಈ ಮೂರು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ 47 ಜನ ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದು ತರಬೇತಿಯ ಲಾಭವನ್ನು ಪಡೆದುಕೊಂಡರು.




## ಕಿಸಾನ್ ಭಾಗ್ಯದಾರಿ-ಪ್ರಾಥಮಿಕ ಹಮಾರಿ ಅಭಿಯಾನದ ಅಂಗವಾಗಿ ಕಿಸಾನ್ ಮೇಳ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು, ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ಆತ್ಮ), ಕೃಷಿ ಇಲಾಖೆ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ ಇವರ ಸಹಯೋಗದಲ್ಲಿ ಅಜಾದಿ ಕಾ ಅಮೃತ ಮಹೋತ್ಸವದ ಪ್ರಯುಕ್ತ (25 ರಿಂದ 30 ಏಪ್ರಿಲ್ 2022) ಅಂಗವಾಗಿ ಕಿಸಾನ್ ಭಾಗಿದಾರಿ–ಪ್ರಾಥಮಿಕ ಹಮಾರಿ ಅಭಿಯಾನದ ಕಾರ್ಯಕ್ರಮ ಹಾಗೂ ಕಿಸಾನ್ ಮೇಳ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದ ಅವರಣದಲ್ಲಿ ಆಯೋಜಿಸಲಾಯಿತು.

ಡಾ. ಚೇತನ್ ಎನ್. ವಿಜ್ಞಾನಿಗಳು (ಮೀನುಗಾರಿಕೆ) ಕೃಷಿ ವಿಜ್ಞಾನ ಕೇಂದ್ರ, ದ.ಕ. ಇವರು ರೈತರನ್ನು, ಅತಿಥಿಗಳನ್ನು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮಕ್ಕೆ ದಕ್ಷಿಣ ಕನ್ನಡದ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಸಂಪತ್ ಸಾಮ್ರಾಜ್ಯ ಉದ್ಘಾಟಿಸಿದರು. ಶ್ರೀಮತಿ ಸೀತಾ ಎಂ.ಸಿ., ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಶ್ರೀಮತಿ ಸಂಗೀತ ಕರ್ತ, ಉಪ ಪ್ರಬಂಧಕರು, ನಬಾರ್ಡ್, ಮಂಗಳೂರು, ಶ್ರೀ ಭರತ್ ಕುಮಾರ್, ಪುರಸಭೆ ಸದಸ್ಯರು, ಮಂಗಳೂರು ಮಹಾನಗರ ಪಾಲಿಕೆ, ಮಂಗಳೂರು ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಿಸಾನ್ ಮೇಳದ ತಾಕುಗಳನ್ನು ಶ್ರೀ. ಮನೋಹರ ಶೆಟ್ಟಿ, ಕಾರ್ಯದರ್ಶಿಗಳು, ರಾಜ್ಯ ರೈತ ಸಂಘ, ದಕ್ಷಿಣ ಕನ್ನಡ ಇವರುಗಳು ಉದ್ಘಾಟಿಸಿದರು. ಕಿಸಾನ್ ಮೇಳದ ಪ್ರಯುಕ್ತ ಕಿರು ಧಾನ್ಯಗಳು, ಎಣ್ಣೆಕಾಳುಗಳ ಬೆಳೆಗಳು ಹಾಗೂ ಜೈವಿಕ ಬಲವರ್ಧಿತ ಬೆಳೆಗಳ ಬಗ್ಗೆ ರೈತರು–ವಿಜ್ಞಾನಿಗಳ ಸಂವಾದ ಕಾರ್ಯಕ್ರಮ ಹಾಗೂ ಜಾನುವಾರುಗಳ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿತ್ತು. ಒಟ್ಟು 126 ರೈತರು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು. ಕಿಸಾನ್ ಮೇಳವನ್ನು ಯಶ್ವಸಿಗೊಳಿಸುವಲ್ಲಿ ಕೆ.ವಿ.ಕೆ. ವಿಜ್ಞಾನಿಗಳು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.







## ಕರಾವಳಿ ಪ್ರದೇಶದಲ್ಲಿ ಆರ್ಥಿಕ ಸ್ವಾವಲಂಬನೆಗೆ ತೋಟಗಾರಿಕೆ ಬೆಳೆಗಳ ಕೃಷಿ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರಿನಲ್ಲಿ ದಿನಾಂಕ 04.04.2022ರಂದು ದಕ್ಷಿಣ ಕನ್ನಡದ ಕೃಷಿ ಪರಿಕರ ಮಾರಾಟಗಾರರಿಗೆ ತರಬೇತಿಯನ್ನು ಅಯೋಜಿಸಿದ್ದು ಈ ತರಬೇತಿಗೆ ಡಾ. ರವಿರಾಜ ಶೆಟ್ಟಿ, ಸಹಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರ, ಉಳ್ಳಾಲ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಗೋಡಂಬಿ ಬೆಳೆಯನ್ನು ಕೇಂದ್ರೀಕರಿಸಿ ಕರಾವಳಿ ಪ್ರದೇಶದ ತೋಟಗಾರಿಕಾ ಬೆಳೆಗಳ ಮಹತ್ವದ ಕುರಿತು ಉಪನ್ಯಾಸ ನೀಡಿದರು. ಇದರ ಜೊತೆಗೆ ಗೊಡಂಬಿ ಮಾತ್ರವಲ್ಲದೆ ಗೊಡಂಬಿ ಹಣ್ಣುಗಳು ಸಹ ಹೆಚ್ಚು ಮೌಲ್ಯಯುತವಾಗಿದ್ದು, ಗೋಡಂಬಿ ಹಣ್ಣುಗಳನ್ನು ಬಳಸದೆ ವ್ಯರ್ಥ ಮಾಡುತ್ತಿದ್ದೇವೆ ಎಂದು ಹೇಳಿದರು. ಕಾಳು ಮೆಣಸಿನಲ್ಲಿ ಕಸಿ ಕಟ್ಟುವ ಬಗ್ಗೆಯ ಮಾಹಿತಿ ನೀಡಿದರು.

ಡಾ. ಕೇದಾರನಾಥ, ವಿಜ್ಞಾನಿ (ಸಸ್ಯ ಸಂರಕ್ಷಣೆ), ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ಇವರು ತಮ್ಮ ಉಪನ್ಯಾಸದಲ್ಲಿ ಕೀಟ ಮತ್ತು ರೋಗ ನಿರ್ವಹಣೆಯ ಪ್ರಾಮುಖ್ಯತೆ, ಹಾನಿಕಾರಕ ಕೀಟಗಳು ಮತ್ತು ಪ್ರಯೋಜನಕಾರಿ ಕೀಟಗಳ ನಡುವಿನ ವ್ಯತ್ಯಾಸಗಳು, ಪರಾಗಸ್ಪರ್ಶ ಮತ್ತು ಕೀಟದಾಳಿಯ ನಿಯಂತ್ರಣದಲ್ಲಿ ಪ್ರಯೋಜನಕಾರಿ ಕೀಟಗಳ ಪಾತ್ರಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡಿದರು. ಡಾ. ಶಂಶುದ್ದೀನ್ ಎಂ. ಹಿರಿಯ ವಿಜ್ಞಾನಿ(ಮಣ್ಣು ವಿಜ್ಞಾನ), ಭಾ.ಕೃ.ಅ.ಪ.–ಡಿ.ಸಿ.ಆರ್. ಪುತ್ತೂರು ಇವರು ಮಣ್ಣಿನಲ್ಲಿ ಪೋಷಕಾಂಶಗಳ ಬಳಕೆ, ಸಸ್ಯಗಳಲ್ಲಿನ ಪೋಷಕಾಂಶಗಳ ಕೊರತೆ ಹಾಗೂ ಅದರ ಲಕ್ಷಣಗಳು ಮತ್ತು ಅವುಗಳ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಡಾ. ಮಲ್ಲಿಕಾರ್ಜುನ ಎಲ್, ವಿಜ್ಞಾನಿ (ಮಣ್ಣು ವಿಜ್ಞಾನ) ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ಇವರು ಮಣ್ಣಿನ ರಚನೆ, ಮಣ್ಣಿನ ವಿಧಗಳು ಮತ್ತು ಮಣ್ಣಿನ ಗುಣಲಕ್ಷಣಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ಡಾ. ಟಿ.ಜೆ. ರಮೇಶ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು ಇವರು ಕೃಷಿ ವಿಜ್ಞಾನ ಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಮಹಿಳೆಯರು ಮೀನಿನಿಂದ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವುದರಿಂದ ಹೆಚ್ಚಿನ ಆದಾಯವನ್ನು ಪಡೆಯಬಹುದು ಎಂದು ತಿಳಿಸಿದರು.






## ನೂತನವಾಗಿ ನೇಮಕಗೊಂಡ ಸಾಗರಮಿತ್ರರಿಗೆ ತರಬೇತಿ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮತ್ತು ಮೀನುಗಾರಿಕೆ ಇಲಾಖೆ, ದಕ್ಷಿಣ ಕನ್ನಡ, ,ಉಡುಪಿ, ಮತ್ತು ಉತ್ತರ ಕನ್ನಡ ಜಿಲ್ಲೆ ಇದರ ಸಹಯೋಗದಲ್ಲಿ ಕರ್ನಾಟಕ ರಾಜ್ಯದ ನೂತನವಾಗಿ ನೇಮಕಗೊಂಡ ಸಾಗರ ಮಿತ್ರರಿಗೆ ತರಬೇತಿ ಕಾರ್ಯಕ್ರಮ ಮತ್ತು ಮಾರ್ಗದರ್ಶನವನ್ನು ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರುನಲ್ಲಿ  ದಿನಾಂಕ 16 ರಿಂದ 17 ಮೇ 2022ರಂದು ಆಯೋಜಿಸಲಾಗಿತ್ತು. ಶ್ರೀ ಸುಧೀರ್, ಜಂಟಿ ನಿರ್ದೇಶಕರು, (ಸಮುದ್ರ, ಕರ್ನಾಟಕ ಸರ್ಕಾರದ ಮೀನುಗಾರಿಕಾ ಇಲಾಖೆ) ಕಾರ್ಯಕ್ರಮದ ಉದ್ಘಾಟಕರಾಗಿದ್ದರು. ಶ್ರೀ ದಿನೇಶ್ ಕಲ್ಲೇರ್, ಕೆ.ಎಫ್.ಡಿ.ಸಿ.ಯ. ವ್ಯವಸ್ಥಾಪಕ ನಿರ್ದೇಶಕರು, ಡಾ. ಪ್ರಕಾಶ್ ಬಿ.ಕೆ. ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಶ್ರೀ ಹರೀಶ್ ಕುಮಾರ್, ಜಂಟಿ ನಿರ್ದೇಶಕರು, ಮೀನುಗಾರಿಕಾ ಇಲಾಖೆ, ದ.ಕ., ಶ್ರೀ ಶಿವಕುಮಾರ್, ಜಂಟಿ ನಿರ್ದೇಶಕರು, ಮೀನುಗಾರಿಕಾ ಇಲಾಖೆ, ಉಡುಪಿ, ಶ್ರೀ ಗಣೇಶ್ ಕೆ. ಜಂಟಿ ನಿರ್ದೇಶಕರು ಮೀನುಗಾರಿಕಾ ಇಲಾಖೆ, ಉಡುಪಿ,  ಶ್ರೀಮತಿ ಕವಿತಾ, ಉಪನಿರ್ದೇಶಕರು, ಮೀನುಗಾರಿಕಾ ಇಲಾಖೆ, ಉತ್ತರ ಕನ್ನಡ, ಡಾ. ಸುಶ್ಮಿತಾ ರಾವ್, ಉಪನಿರ್ದೇಶಕರು, ಮೀನುಗಾರಿಕಾ ಇಲಾಖೆ, ದ.ಕ. ಮಂಗಳೂರು ಇವರು ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ಟಿ.ಜೆ. ರಮೇಶ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು ಇವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಮುದ್ರ ಮೀನುಗಾರಿಕೆ ವಲಯದಲ್ಲಿ ಮೀನುಗಾರಿಕೆ ಮತ್ತು ಮಾಹಿತಿ ಸಂಗ್ರಹಣೆಗೆ ಸಂಬಂಧಿಸಿದಂತೆ ದೃಷ್ಟಿಕೋನ ನೀಡಲು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಾಗರ ಮಿತ್ರ ಅವರ ಕರ್ತವ್ಯಗಳು ಮತ್ತು ಕರಾವಳಿ ಪ್ರದೇಶದಲ್ಲಿ ರಾಜ್ಯದ ವಿವಿಧ ಮೀನುಗಾರಿಕೆ ಚಟುವಟಿಕೆಗಳ ಕುರಿತು ವಿಶೇಷ ತರಬೇತಿಯೊಂದಿಗೆ ಸಮುದ್ರ ಮೀನು ಹಿಡಿಯುವ ವಿಶೇಷ ಪ್ರಾಮುಖ್ಯತೆಯೊಂದಿಗೆ ತಿಳಿಸಲಾಯಿತು. ಸಮುದ್ರದಲ್ಲಿ  ಜಲಚರ ಪ್ರಾಣಿಗಳ ಸಾಕಣೆ,  ಪಂಜರದಲ್ಲಿ ಮೀನು ಸಾಕಣೆ, ತಂಗುದಾಣಗಳಲ್ಲಿ ಮೀನುಗಳ ನೈರ್ಮಲ್ಯ, ನಿರ್ವಹಣೆ, ಒಂದು ಜಿಲ್ಲೆ ಒಂದು ಉತ್ಪನ್ನ, ಮೀನುಗಳನ್ನು ಸುಸಜ್ಜಿತವಾಗಿ ಸೌರಶಕ್ತಿಯನ್ನು ಬಳಸಿ ಒಣಗಿಸುವುದು, ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ, ಮಾರುಕಟ್ಟೆ, ಮುಂತಾದ ವಿಷಯಗಳ ಕುರಿತು ಕಾರ್ಯಕ್ರಮದಲ್ಲಿ ತರಬೇತಿ ನೀಡಲಾಯಿತು. ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೈಬ್ರಿಡ್ ಸೋಲಾರ್– ಎಲೆಕ್ಟ್ರಿಕಲ್ ಡ್ರೈಯರ್ (ಭಾ.ಕೃ.ಅ.ಪ., ಸಿ.ಐ.ಎಫ್.ಟಿ., ಕೊಚ್ಚಿನ್ ) ಬಳಸಿ ಮೀನು ಒಣಗಿಸುವ ಪ್ರಾಯೋಗಿಕ ತರಬೇತಿಯನ್ನು ಸಹ ನೀಡಲಾಯಿತು. ಡಾ. ಚೇತನ್ ಎನ್. ವಿಜ್ಞಾನಿಗಳು (ಮೀನುಗಾರಿಕೆ) ಕೆ.ವಿ.ಕೆ. ದ.ಕ. ಇವರು ಒಂದು ಜಿಲ್ಲೆ ಒಂದು ಉತ್ಪನ್ನ ವಿಷಯದಡಿಯಲ್ಲಿ ಮೌಲ್ಯವರ್ಧನೆಯ ವಿವಿಧ ಅಂಶಗಳ ಕುರಿತು ರೈತರಿಗೆ ತರಬೇತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಸಹಾಯಕ ಮೀನುಗಾರಿಕಾ ನಿರ್ದೇಶಕರುಗಳಾದ ಶ್ರೀ ದಿಲೀಪ್ ಮತ್ತು ಶ್ರೀಮತಿ ಮಂಜುಳಾಶ್ರೀ ಭಾಗವಹಿಸಿದ್ದರು.







## ವಿಶ್ವ ಜೇನು ನೊಣ ದಿನಾಚರಣೆ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡದಲ್ಲಿ ದಿನಾಂಕ 20.05.2022ರಂದು ವಿಶ್ವ ಜೇನು ನೊಣ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕೇಂದ್ರ ಮೀನುಗಾರಿಕಾ ವಿಜ್ಞಾನಿ ಡಾ. ಚೇತನ್ ಎನ್. ಉದ್ಘಾಟಿಸಿ ಪರಿಸರದಲ್ಲಿ ಜೇನು ನೊಣಗಳ ಮಹತ್ವ ಮತ್ತು ಜಿಲ್ಲೆಯ ಜೇನು ಉತ್ಪಾದಕರ ಸಂಘದ ಜೇನು ಉತ್ಪಾದನೆ, ಬ್ರಾಂಡಿಂಗ್ ಮತ್ತು ಮಾರ್ಕೆಟಿಂಗ್‌ನ ಪ್ರಯತ್ನಗಳ ಕುರಿತು ಶ್ಲಾಘಿಸಿದರು. ಡಾ. ಮಲ್ಲಿಕಾರ್ಜುನ ಎಲ್, ವಿಜ್ಞಾನಿಗಳು (ಮಣ್ಣು ವಿಜ್ಞಾನ) ವಿಶ್ವ ಜೇನು ನೊಣ ದಿನಾಚರಣೆಯ ವಿಶೇಷತೆಯನ್ನು ತಿಳಿಸಿದರು. ಇದರ ಜೊತೆಗೆ ಕಾರ್ಯಕ್ರಮವನ್ನು ಸಂಯೋಜಿಸಿದರು. ಜೇನು ದಿನಾಚರಣೆಯ ಅಂಗವಾಗಿ ಜೇನು ನೊಣಗಳ ವೈಜ್ಞಾನಿಕ ಸಾಕಾಣಿಕೆಯ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಜೇನು ಸಾಕಾಣಿಕೆ ರೈತರಿಗೆ ಕೃಷಿಯಲ್ಲಿ ಆದಾಯವನ್ನು ಹೆಚ್ಚಿಸುವ ಒಂದು ಉಪಕಸುಬು ಇದರ ಉತ್ತಮ ಸಾಕಾಣಿಕೆಗೆ ವೈಜ್ಞಾನಿಕ ನಿರ್ವಹಣೆಯ ಜೊತೆಗೆ ಜೇನು ನೊಣಗಳ ವಿಧ ಹಾಗೂ ಅವುಗಳ ಮಾಹಿತಿ ಅತೀ ಅವಶ್ಯಕ ಎಂದು ತಿಳಿಸಿದರು. ಕೇಂದ್ರದ ವಿಜ್ಞಾನಿಗಳಾದ ಡಾ. ಕೇದಾರನಾಥ, ಡಾ. ರಶ್ಮಿ ವಿಜ್ಞಾನಿಗಳು (ತೋಟಗಾರಿಕೆ) ಮತ್ತು 37 ಜನ ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದು ತರಬೇತಿಯ ಲಾಭವನ್ನು ಪಡೆದುಕೊಂಡರು.



## ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳೊಂದಿಗೆ ನೋಡಲ್ ಅಧಿಕಾರಿ, ಭಾ.ಕೃ.ಅ.ಪ.-ಅಟಾರಿರವರ ಸಂವಾದ ಕಾರ್ಯಕ್ರಮ ಮತ್ತು ಕ್ಷೇತ್ರ ಭೇಟಿ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ಇದರ ನೋಡಲ್ ಅಧಿಕಾರಿಯಾದ ಡಾ. ಡಿ.ವಿ. ಕೋಲೇಕರ್, ವಿಜ್ಞಾನಿಗಳು, (ಕೃಷಿ ವಿಸ್ತರಣೆ) ಭಾ.ಕೃ.ಅ.ಪ.–ಅಟಾರಿ, ವಲಯ –11 ಬೆಂಗಳೂರು ಇವರು ದಿನಾಂಕ: 06.06.2022ರಂದು ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು ಇಲ್ಲಿಗೆ ಭೇಟಿ ನೀಡಿ ವಿಜ್ಞಾನಿಗಳೊಂದಿಗೆ ಸಂವಾದ ನಡೆಸಿದರು. ಇದಲ್ಲದೇ ಕೃಷಿ ವಿಜ್ಞಾನ ಕೇಂದ್ರದ ಫಾರಂ ನಲ್ಲಿ ಸ್ಥಾಪಿಸಲಾದ ಎಲ್ಲಾ ಪ್ರಾತ್ಯಕ್ಷಿಕೆ ಘಟಗಳಿಗೆ ಭೇಟಿ ನೀಡಿ, ಎಲ್ಲಾ ಪ್ರಾತ್ಯಕ್ಷಿಕೆಗಳ ಒಂದು ತಾಕನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ನಿರ್ವಹಣೆ ಮಾಡಬೇಕು ಎಂದು ಸಲಹೆ ನೀಡಿದರು. ಇದರಿಂದ ರೈತರು ತಮ್ಮ ಜಮೀನಿಗೆ ಭೇಟಿ ನೀಡುವ ಸಮಯದಲ್ಲಿ ಸುಧಾರಿತ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆಯಾಗುತ್ತದೆ ಎಂದು ಸಲಹೆ ನೀಡಿದರು.












ರೈತರ ಕ್ಷೇತ್ರ ಭೇಟಿಗಾಗಿ ಬಂಟ್ವಾಳ ತಾಲೂಕಿನ ಗೋಳ್ತಮಜು ಗ್ರಾಮದ ಗ್ರಾಮೀಣ ಯುವಕ ಶ್ರೀ ಪ್ರಜ್ವಲ್ ಪ್ರತೀಕ್ ಅವರು ಸ್ಥಾಪಿಸಿದ ವಿನೂತನ ಮೀನು ಕೃಷಿ ಪದ್ಧತಿ–ಬಯೋಫ್ಲೋಕ್ ಮೀನು ಕೃಷಿ ಪದ್ಧತಿಯಡಿಯಲ್ಲಿ ರೂಪಚಂದ್ ಮೀನು (ಪಾಕುಮೀನು) ನಿರ್ವಹಿಸುತ್ತಿರುವ ಜಮೀನಿಗೆ ನೋಡಲ್ ಅಧಿಕಾರಿಗಳು ಕೆ.ವಿ.ಕೆ. ವಿಜ್ಞಾನಿಗಳೊಂದಿಗೆ ಭೇಟಿ ನೀಡಿದರು.



ಇದರ ಜೊತೆಗೆ, ಕಾಳುಮೆಣಸಿನಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆಯ ತಂತ್ರಜ್ಞಾನ ಪರಿಶೀಲನೆ ಮತ್ತು ಅಡಿಕೆಯಲ್ಲಿ ಸುಳಿ ತಿಗಣೆ ರೋಗದ ನಿರ್ವಹಣೆಯ ಬಗ್ಗೆ ತೆಗೆದುಕೊಂಡ ತಂತ್ರಜ್ಞಾನಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಪುತ್ತೂರು ತಾಲೂಕಿನ ಬಲ್ನಾಡು ಗ್ರಾಮದ ಪ್ರಗತಿಪರ ರೈತ ಶ್ರೀ ಸುರೇಶ್ ಬಲ್ನಾಡು ಇವರ ತೋಟಕ್ಕೆ ಭೇಟಿ ನೀಡಿದರು. ತಮ್ಮ ಮನೆಯ ಅವಶ್ಯಕತೆಗೆ ಅನುಗುಣವಾಗಿ ನೀರಿನ ಸಂಪನ್ಮೂಲಗಳನ್ನು ಯಶಸ್ವಿಯಾಗಿರುವ ಶ್ರೀ ಸುರೇಶ್ ಬಲ್ನಾಡು ಇವರ ಕುರಿತು ನೋಡಲ್ ಅಧಿಕಾರಿಯವರು ಮೆಚ್ಚುಗೆ ವ್ಯಕ್ತಪಡಿಸಿದರು. ಮೀನುಗಾರಿಕೆಗೆ ಲಭ್ಯವಿರುವ ನೀರಿನ ಸಂಪನ್ಮೂಲಗಳನ್ನು ಬಳಸಿಕೊಂಡು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವಂತೆ ರೈತರಿಗೆ ನೋಡಲ್ ಅಧಿಕಾರಿಯವರು ಸಲಹೆ ನೀಡಿದರು.

ಕಡಬ ತಾಲೂಕಿನ ಬೂದಲೂರು ಗ್ರಾಮದ ಶ್ರೀ ಪ್ರಶಾಂತ್ ಅವರು ಸ್ಥಾಪಿಸಿರುವ ಎರೆಹುಳು ಗೊಬ್ಬರ ಉತ್ಪಾದನಾ ಘಟಕಕ್ಕೆ ಭೇಟಿ ನೀಡಿ ತಮ್ಮ ಉತ್ಪನ್ನವನ್ನು ವಾಣಿಜ್ಯಕರಣಕ್ಕಾಗಿ ಬ್ರಾಂಡ್ ಮಾಡಲು ಸೂಚಿಸಿದರು ಮತ್ತು ಮಾರುಕಟ್ಟೆಗೆ ಅನುಕೂಲಮಾಡಿಕೊಡುವಂತೆ ಕೆವಿಕೆ ವಿಜ್ಞಾನಿಗಳಿಗೆ ಸೂಚಿಸಿದರು. ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ವಿಜ್ಞಾನಿಗಳು ಮತ್ತು ಕಾರ್ಯಕ್ರಮ ಸಹಾಯಕರು(ಕಂಪ್ಯೂಟರ್) ನೋಡಲ್ ಅಧಿಕಾರಿಗಳೊಂದಿಗೆ ರೈತರ ತಾಕುಗಳಿಗೆ ಭೇಟಿ ನೀಡಲಾಯಿತು.





ದಿನಾಂಕ 07.06.2022ರಂದು ನೋಡಲ್ ಅಧಿಕಾರಿಗಳು ಹಾಗೂ ಹಿರಿಯ ವಿಜ್ಞಾನಿಗಳೊಂದಿಗೆ ಮೂಡಬಿದಿರೆ ತಾಲೂಕಿನ ಉತ್ತಮ ಕೃಷಿ ಮಹಿಳೆ ಪ್ರಶಸ್ತಿ ವಿಜೇತರಾದ ಶ್ರೀಮತಿ ಜಾಸ್‌ಮೀನ್ ಅರೆಹ್ನಾ ಅವರ ತಾಕಿಗೆ ಭೇಟಿ ನೀಡಿ ಅವರ ತಾಕಿನಲ್ಲಿ ಆಡು ಸಾಕಣೆ, ಕೋಳಿ ಸಾಕಣೆ, ಹಣ್ಣಿನ ಗಿಡಗಳನ್ನು ವಿಶೇಷವಾಗಿ ಡ್ರಾಗನ್ ಹಣ್ಣುಗಳನ್ನು ವಾಣಿಜ್ಯ ಮಟ್ಟದಲ್ಲಿ ನಿರ್ವಹಿಸುತ್ತಿರುವುದನ್ನು ವೀಕ್ಷಿಸಲಾಯಿತು.



## ನೆರೆಪೀಡಿತ ಪ್ರದೇಶಗಳಿಗೆ ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯ ಪ್ರಾತ್ಯಕ್ಷಿಕೆ

ದಕ್ಷಿಣ ಕನ್ನಡದಲ್ಲಿ ಭತ್ತವು ಪ್ರಮುಖವಾದ ಆಹಾರ ಬೆಳೆಯಾಗಿದ್ದು, ಮುಂಗಾರಿನಲ್ಲಿ ಬಯಲು ಮತ್ತು ತಗ್ಗು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಈ ಜಿಲ್ಲೆಯಲ್ಲಿ ಕಡಿಮೆ ಇಳುವರಿ ನೀಡುವ ಭತ್ತದ ತಳಿಗಳಾದ ಕಜೆ ಜಯ, ಎಂ.ಓ.–4, ಉಮಾ ತಳಿಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದು ಈ ತಳಿಗಳು ನೆರೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿರುವುದಿಲ್ಲ ಹಾಗೂ ರಸ ಗೊಬ್ಬರಕ್ಕೆ ಪ್ರತಿಕ್ರಿಯಿಸುವುದಿಲ್ಲ. ಆದುದರಿಂದ ಜಿಲ್ಲೆಯಲ್ಲಿ ಭತ್ತದ ಇಳುವರಿ ಕಡಿಮೆಯಾಗುತ್ತಿದೆ. ಈ ಸಮಸ್ಯೆಯನ್ನು ಮನಗಂಡು ಡಾ. ನವೀನ್ ಕುಮಾರ್, ಬಿ.ಟಿ. ವಿಜ್ಞಾನಿ (ಬೇಸಾಯ ಶಾಸ್ತ್ರ) ಇವರು ಮುಂಚೂಣಿ ಪ್ರಾತ್ಯಕ್ಷಿಕೆ 2021–22ರ ಯೋಜನೆಯಡಿ ನೆರೆ ನಿರೋಧಕ ಕೆಂಪು ಭತ್ತದ ತಳಿ ಸಹ್ಯಾದ್ರಿ ಪಂಚಮುಖಿ ಮತ್ತು ಸಹ್ಯಾದ್ರಿ ಕೆಂಪುಮುಕ್ತಿ ತಳಿಗಳ ಪ್ರಾತ್ಯಕ್ಷಿಕೆಯನ್ನು ಬಂಟ್ವಾಳ ತಾಲೂಕಿನ ವಗ್ಗ, ಮಂಗಳೂರು ತಾಲೂಕಿನ ಮೂಲ್ಕಿ ಮತ್ತು ಕಿಲೆಂಜಾರು ಗ್ರಾಮಗಳಲ್ಲಿ ದಿನಾಂಕ 24.06.2022 ರಂದು ಕೈಗೊಳ್ಳಲಾಯಿತು. 20 ರೈತರಿಗೆ ಅನುಕೂಲವಾಗುವಂತೆ ಮುಂಚೂಣಿಯ ಪ್ರಾತ್ಯಕ್ಷಿಕೆಯಡಿಯಲ್ಲಿ ಹೊಸ ತಳಿಗಳನ್ನು ಅಳವಡಿಸಿಕೊಳ್ಳಲು ಹಾಗೂ ರೈತರನ್ನು ಪ್ರೇರೇಪಿಸಲು 5 ಕ್ವಿಂಟಾಲ್ ದೃಢೀಕೃತ ಭತ್ತದ ಬೀಜವನ್ನು ಒದಗಿಸಲಾಯಿತು. ಈ ಕಾರ್ಯಕ್ರಮದಲ್ಲಿ ರೈತರಿಗೆ ಭತ್ತದಲ್ಲಿ ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ತರಬೇತಿ ನೀಡಲಾಯಿತು.





## ಮಳೆ ನೀರು ಕೊಯ್ಲು ಮತ್ತು ಪೈಪ್ ಕಾಂಪೋಸ್ಟ್‌ನಿಂದ ಮನೆಕಸ ನಿರ್ವಹಣೆ

ಭಾ. ಕೃ. ಅ. ಪ. –ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ವತಿಯಿಂದ ದಿನಾಂಕ 17–03–2022 ರಂದು 'ಮಳೆ ನೀರು ಕೊಯ್ಲು ಮತ್ತು ಪೈಪ್ ಕಾಂಪೋಸ್ಟ್‌ನಿಂದ ಮನೆಕಸ ನಿರ್ವಹಣೆ'ಯ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಸಂಜೀವಿನಿ ಮಹಿಳಾ ಒಕ್ಕೂಟದ ಸದಸ್ಯರಿಗೆ ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಯಿತು. ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಮಾತನಾಡಿ, ನೀರು ಅತ್ಯಂತ ಅವಶ್ಯಕ ಮತ್ತು ಅಮೂಲ್ಯವಾದ ಸಂಪನ್ಮೂಲವಾಗಿದ್ದು, ಭೂಮಿಯ ಮೇಲಿನ ಎಲ್ಲಾ ಜೀವಿಗಳಿಗೆ ಅವಶ್ಯಕವಾಗಿದೆ. ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ನೀರಿನ ಬೇಡಿಕೆಯನ್ನು ಸಾಕಾರಗೊಳಿಸಲು 'ಮಳೆ ನೀರು ಕೊಯ್ಲು' ಎಂಬ ಪರಿಕಲ್ಪನೆಯು ಸರಿಯಾದ ರೀತಿಯಲ್ಲಿ ಅನುಷ್ಠಾನವಾಗಬೇಕಾಗಿದೆ. ಮಣ್ಣಿನ ಸವಕಳಿ ತಪ್ಪಿಸಲು, ಅಂತರ್ಜಲ ಹೆಚ್ಚಿಸಲು, ಉತ್ತಮ ಆರೋಗ್ಯಕ್ಕಾಗಿ ಶುದ್ಧ ನೀರನ್ನು ಪೂರೈಸಲು ಮಳೆ ನೀರು ಕೊಯ್ಲು ಅಳವಡಿಕೆ ತುಂಬಾ ಅವಶ್ಯಕ. ಆದರೆ ಈ ಬಗ್ಗೆ ಅರಿವಿನ ಕೊರತೆಯಿಂದ ಪ್ರತಿ ವರ್ಷ ಸಾವಿರಾರು ಲೀಟರ್ ಮಳೆ ನೀರನ್ನು ಕಳೆದುಕೊಳ್ಳುತ್ತಿದ್ದೇವೆ. ಪ್ರಕೃತಿಗೆ ಮತ್ತು ಸಮಾಜಕ್ಕೆ ಇದರ ಉಪಯುಕ್ತತೆಯನ್ನು ಅರಿತುಕೊಂಡು, ಸುರಕ್ಷಿತ ಮತ್ತು ನೀರಿನ ಸಮೃದ್ಧ ಭವಿಷ್ಯಕ್ಕಾಗಿ ಇದನ್ನು ನಮ್ಮ ಮನೆ, ಕಟ್ಟಡಗಳಲ್ಲಿ, ಉದ್ಯಾನವನಗಳಲ್ಲಿ ಅಳವಡಿಸಲು ಪ್ರಾರಂಭಿಸಬೇಕಾಗಿದೆ ಎಂದು ತಿಳಿಸಿದರು. ಪೈಪ್ ಕಾಂಪೋಸ್ಟ್‌ನಿಂದ ಮನೆ ಕಸದ ಉತ್ತಮ ನಿರ್ವಹಣೆಯಾಗಿ, ಅದರಿಂದ ಲಭಿಸಿದ ಫಲವತ್ತಾದ ಕಾಂಪೋಸ್ಟ್ ಗೊಬ್ಬರವನ್ನು ಪೌಷ್ಠಿಕ ಕೈತೋಟ, ತಾರಸಿ ಕೈತೋಟ, ಹೂ ಕುಂಡಗಳ ಬಳಕೆಗೆ ಉಪಯೋಗಿಸಬಹುದು ಎಂದು ತಿಳಿಸಿದರು. ಡಾ. ಟಿ. ಜೆ. ರಮೇಶ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಪಶು ವಿಜ್ಞಾನಿ ಡಾ. ಶಿವಕುಮಾರ ಆರ್, ಭಾರತೀಯ ವಿಕಾಸ ಟ್ರಸ್ಟ್‌ನ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಜೀವನ್ ಕೋಲ್ಯ, ಕೆವಿಕೆಯ ಸಿಬ್ಬಂದಿ ಹಾಗೂ 55 ರೈತ ಮಹಿಳೆಯರು ಮತ್ತು ರೈತರು ಭಾಗಿಯಾಗಿದ್ದರು.







## ವಿಶ್ವ ಪರಿಸರ ದಿನಾಚರಣೆ

ಭಾ. ಕೃ. ಅ. ಪ. –ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರಿನಲ್ಲಿ ದಿನಾಂಕ 15–06–2022 ರಂದು 'ವಿಶ್ವ ಪರಿಸರ ದಿನಾಚರಣೆ'ಯನ್ನು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಸುಸ್ಥಿರವಾಗಿ ಬದುಕುವುದು ಎಂಬ ಘೋಷವಾಕ್ಯದೊಂದಿಗೆ ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಯಿತು. ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಕಾರ್ಯಕ್ರಮವನ್ನು ಸಂಯೋಜಿಸಿ, ವಿಶ್ವ ಪರಿಸರ ದಿನಾಚರಣೆಯ ಮಹತ್ವ, ಇತಿಹಾಸ ಹಾಗೂ ಸುಸ್ಥಿರ ಜೀವನಕ್ಕಾಗಿ ಪರಿಸರದ ಸಂರಕ್ಷಣೆಯ ಕುರಿತು ಮಾಹಿತಿ ತಿಳಿಸಿದರು. ನಂತರ ಕೇಂದ್ರದ ಆವರಣದಲ್ಲಿ ತೆಂಗು ಮತ್ತು ಪಪಾಯ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಪಶು ವಿಜ್ಞಾನಿ ಡಾ. ಶಿವಕುಮಾರ ಆರ್. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮೀನುಗಾರಿಕಾ ವಿಜ್ಞಾನಿ ಡಾ. ಚೇತನ್ ಎನ್. ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ. ಕೇದಾರನಾಥ, ಕೆವಿಕೆಯ ಸಿಬ್ಬಂದಿ ಹಾಗೂ 43 ರೈತ ಮತ್ತು ರೈತಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.






## ಅಂತರಾಷ್ಟ್ರೀಯ ಯೋಗ ದಿನಾಚರಣೆ

ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು ವತಿಯಿಂದ ದಿನಾಂಕ 21–06–2022 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮೂಡಬಿದಿರೆ ತಾಲೂಕಿನ ಕಲ್ಲಮೂಂಡ್ಕೂರು ಗ್ರಾಮದಲ್ಲಿ ಆಚರಿಸಲಾಯಿತು. ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಕಾರ್ಯಕ್ರಮವನ್ನು ಸಂಯೋಜಿಸಿ, ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಮಹತ್ವ, ಇತಿಹಾಸ ಹಾಗೂ ಆರೋಗ್ಯಕರ ಜೀವನಕ್ಕಾಗಿ ಯೋಗ ಪರಿಪಾಲನೆ ಹಾಗೂ ಅದರ ದೈನಂದಿನ ಅಳವಡಿಕೆ ಕುರಿತು ಮಾಹಿತಿಯ ಜೊತೆಗೆ ಸಮತೋಲನ ರಸಗೊಬ್ಬರಗಳ ಬಳಕೆಯ ಕುರಿತು ಮತ್ತು ಸಾಮಾಜಿಕ ಅರಣ್ಯಗಳಲ್ಲಿ ಬಿದಿರು ಕೃಷಿಯ ಬಗ್ಗೆ ಮಾಹಿತಿ ನೀಡಿದರು. ಪಶು ವಿಜ್ಞಾನಿ ಡಾ. ಶಿವಕುಮಾರ ಆರ್. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಆರ್ಥಿಕ ಸಾಕ್ಷರತಾ ಪರಿಷತ್ತಿನ ವಿಭಾಗದ ಕೆನರಾ ಬ್ಯಾಂಕ್ ಸಿಬ್ಬಂದಿ ಶ್ರೀ ಲತೇಶ್, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನ ತಾಲೂಕಾಧಿಕಾರಿ ಶ್ರೀ ಸುಬ್ರಮಣ್ಯ ಹಾಗೂ ಭಾರತೀಯ ವಿಕಾಸ ಟ್ರಸ್ಟ್‌ನ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಜೀವನ್ ಕೋಲ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸುಮಾರು 82 ರೈತ ಮತ್ತು ರೈತ ಮಹಿಳೆಯರು, ಕೆವಿಕೆಯ ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.








## ಪೆಟ್ರೋಲಿಯಮ್ ಉತ್ಪನ್ನಗಳ ಸಂರಕ್ಷಣೆ ಹಾಗೂ ಇಂಧನ ದಕ್ಷ ಪಂಪ್ ಬಳಕೆಯ ಜಾಗೃತಿ ಕುರಿತು ಕೃಷಿ ಕಾರ್ಯಾಗಾರ

ಪೆಟ್ರೋಲಿಯಮ್ ಸಂರಕ್ಷಣೆ ಹಾಗೂ ಸಂಶೋಧನಾ ಸಂಘದ ನಿರ್ದೇಶನದಂತೆ ಕೃಷಿ ವಲಯದಲ್ಲಿ ಪೆಟ್ರೋಲಿಯಮ್ ಉತ್ಪನ್ನಗಳ ಸಂರಕ್ಷಣೆ ಹಾಗೂ ಇಂಧನ ದಕ್ಷ ಪಂಪ್ ಬಳಕೆಯ ಜಾಗೃತಿ ಕುರಿತು ಕೃಷಿ ಕಾರ್ಯಾಗಾರವನ್ನು ದಿನಾಂಕ 25.03.2022 ರಂದು ಭಾ. ಕೃ. ಅ. ಪ. –ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಗಾರದಲ್ಲಿ ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಪೆಟ್ರೋಲಿಯಮ್ ಉತ್ಪನ್ನಗಳ ಸಂರಕ್ಷಣಾ ಕ್ರಮಗಳ ಬಳಕೆಯ ಕುರಿತು ಮಾತನಾಡಿ, ಅಡುಗೆ ತಯಾರಿಸುವಲ್ಲಿ, ವಾಹನ ಚಲಾಯಿಸುವಲ್ಲಿ ಹಾಗೂ ಇಂಧನ ದಕ್ಷ ಪಂಪ್ ಅಥವಾ ಮೋಟಾರು ಖರೀದಿಸುವ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗೃತಾ ಕ್ರಮಗಳ ಕುರಿತು ವಿವರಿಸಿದರು. ಡಾ. ಟಿ. ಜೆ. ರಮೇಶ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಈ ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿದ್ದರು. ಪಶು ವಿಜ್ಞಾನಿ ಡಾ. ಶಿವಕುಮಾರ ಆರ್, ಕೆವಿಕೆಯ ಸಿಬ್ಬಂದಿ ಹಾಗೂ 42 ರೈತ ಮತ್ತು ರೈತ ಮಹಿಳೆಯರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.




## ಗರೀಬ್ ಕಲ್ಯಾಣ ಸಮ್ಮೇಳನ

ಮಾನ್ಯ ಪ್ರಧಾನ ಮಂತ್ರಿಗಳ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿ ರೈತರೊಂದಿಗಿನ ನೇರ ಸಂವಾದ ಕಾರ್ಯಕ್ರಮದ ನೇರ ಪ್ರಸಾರದ ವೀಕ್ಷಣೆ ಕಾರ್ಯಕ್ರಮವನ್ನು ದಿನಾಂಕ 31.05.2022 ರಂದು ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಯಿತು. ಆರ್ಥಿಕ ಸಾಕ್ಷರತಾ ಪರಿಷತ್ತಿನ ವಿಭಾಗದ ಕೆನರಾ ಬ್ಯಾಂಕ್ ಸಿಬ್ಬಂದಿ ಶ್ರೀ ಲತೇಶ್ ಹಾಗೂ ಭಾರತೀಯ ವಿಕಾಸ ಟ್ರಸ್ಟ್‌ನ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಜೀವನ್ ಕೋಲ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಬ್ಯಾಂಕ್ ಮತ್ತು ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳ ಕುರಿತು ಮಾಹಿತಿ ನೀಡಿದರು. ಕೇಂದ್ರದ ಮಣ್ಣು ವಿಜ್ಞಾನಿ ಡಾ. ಮಲ್ಲಿಕಾರ್ಜುನ ಎಲ್. ಕಾರ್ಯಕ್ರಮದ ಮಹತ್ವವನ್ನು ತಿಳಿಸುವುದರೊಂದಿಗೆ ಕಾರ್ಯಕ್ರಮವನ್ನು ಸಂಯೋಜಿಸಿದರು. ಪಶು ವಿಜ್ಞಾನಿ ಡಾ. ಶಿವಕುಮಾರ ಆರ್. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮೀನುಗಾರಿಕಾ ವಿಜ್ಞಾನಿ ಡಾ. ಚೇತನ್ ಎನ್. ಕೆವಿಕೆಯ ಸಿಬ್ಬಂದಿ ಹಾಗೂ 62 ರೈತ ಮಹಿಳೆಯರು ಮತ್ತು ರೈತರು ಈ ನೇರ ಪ್ರಸಾರದ ವೀಕ್ಷಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.







## ವೈಜ್ಞಾನಿಕ ಹೈನುಗಾರಿಕೆ

ಮೀನುಗಾರಿಕೆ, ಪಶುಸಂಗೋಪನೆ ಹಾಗೂ ಹೈನುಗಾರಿಕೆ ಸಚಿವಾಲಯ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ, ಭಾರತ ಸರ್ಕಾರ ಇವರ ಪ್ರಾಯೋಜಕತ್ವದಲ್ಲಿ ದಿನಾಂಕ: 26–03–2022 ರಿಂದ 28–03–2022 ರವರೆಗೆ ವೈಜ್ಞಾನಿಕ ಹೈನುಗಾರಿಕೆ ತರಬೇತಿ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಸುರತ್ಕಲ್‌ನಲ್ಲಿ ಆಯೋಜಿಸಲಾಯಿತು.

ಈ ತರಬೇತಿ ಕಾರ್ಯಕ್ರಮವನ್ನು ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ಬಂಟ್ವಾಳ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದು, ಶ್ರೀಮತಿ ನೇಬಿಸಾ ಖಾದರ್ ಅಧ್ಯಕ್ಷರು ಗ್ರಾಮ ಪಂಚಾಯತ್. ಕೊಳ್ನಾಡು ಇವರು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದು, ಮುಖ್ಯ ಅತಿಥಿಗಳಾಗಿ ಡಾ. ಪ್ರಸನ್ನ ಕುಮಾರ್, ಉಪನಿರ್ದೇಶಕರು ಪಶುಪಾಲನ ಮತ್ತು ಪಶುವೈದ್ಯ ಸೇವ ಇಲಾಖೆ ದಕ್ಷಿಣ ಕನ್ನಡ ಇವರು ಭಾಗವಹಿಸಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ. ಮಂಕುಡೆ ಶ್ರೀನಿವಾಸ್ ಆಚಾರ್ ಪ್ರಧಾನ ಟ್ರಸ್ಟಿಗಳು, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಮಂಕುಡೆ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ಹೈನುಗಾರಿಕೆಯಲ್ಲಿ ರೈತರು ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕಡಿಮೆ ಖರ್ಚಿನಲ್ಲಿ ಜಾನುವಾರುಗಳ ಆರೋಗ್ಯ ರಕ್ಷಿಸಿಕೊಳ್ಳುವುದರ ಜೊತೆಗೆ ಹೆಚ್ಚು ಆದಾಯವನ್ನು ಗಳಿಸಿಕೊಳ್ಳಬಹುದಾಗಿ ತಿಳಿಸಿದರು. ಈ ಕಾರ್ಯಕ್ರಮವನ್ನು ಡಾ. ಶಿವಕುಮಾರ್. ಆರ್, ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಜ್ಞಾನ ಕೇಂದ್ರ ಇವರು ಸಂಯೋಜಿಸಿದ್ದು, ಸುಮಾರು 45 ಜನ ರೈತರು ಈ ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು. ಡಾ. ಮಲ್ಲಿಕಾರ್ಜುನ ಎಲ್, ವಿಜ್ಞಾನಿಗಳು (ಮಣ್ಣು ವಿಜ್ಞಾನಿ) ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





## ವೈಜ್ಞಾನಿಕ ಪದ್ಧತಿಯಲ್ಲಿ ಕೋಳಿಗಳ ನಿರ್ವಹಣೆ

ಮೀನುಗಾರಿಕೆ, ಪಶುಸಂಗೋಪನೆ ಹಾಗೂ ಹೈನುಗಾರಿಕೆ ಸಚಿವಾಲಯ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ, ಭಾರತ ಸರ್ಕಾರ ಇವರ ಪ್ರಾಯೋಜಕತ್ವದಲ್ಲಿ ದಿನಾಂಕ: 29–03–2022 ರಿಂದ 31–03–2022 ರವರೆಗೆ ವೈಜ್ಞಾನಿಕ ಪದ್ಧತಿಯಲ್ಲಿ ಕೋಳಿಗಳ ನಿರ್ವಹಣೆ ತರಬೇತಿ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಸುರತ್ಕಲ್‌ನಲ್ಲಿ ಆಯೋಜಿಸಲಾಯಿತು.

ಈ ತರಬೇತಿ ಕಾರ್ಯಕ್ರಮವನ್ನು ವಿರಾಟ್ ಸಂಸ್ಥೆ, ಸುರತ್ಕಲ್ ಹಾಗೂ ಭಾರತೀಯ ವಿಕಾಸ್ ಟ್ರಸ್ಟ್, ಮಣಿಪಾಲ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ. ರಾಧಾಕೃಷ್ಣ ಪ್ರಾಂಶುಪಾಲರು, ಶ್ರೀ. ವಿದ್ಯಾದಾಯಿನಿ ಪದವಿ ಪೂರ್ವ ಕಾಲೇಜು ಇವರು ನೆರವೇರಿಸಿ ತಮ್ಮ ಭಾಷಣದಲ್ಲಿ ಹಿತ್ತಲ ಕೋಳಿ ಸಾಕಾಣಿಕೆಯಿಂದ ಆಗುವ ಪ್ರಯೋಜನಗಳ ಬಗ್ಗೆ ತಿಳಿಸಿದರು. ಮೂರು ದಿನಗಳ ಈ ತರಬೇತಿ ಕಾರ್ಯಕ್ರಮದಲ್ಲಿ ಬೇರೆ ಬೇರೆ ವಿಷಯಗಳಲ್ಲಿ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿಯನ್ನು ನೀಡಲಾಯಿತು. ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು ಈ ತರಬೇತಿ ಕಾರ್ಯಕ್ರಮವನ್ನು ಸಂಯೋಜಿಸಿದ್ದು, ಡಾ. ಮಲ್ಲಿಕಾರ್ಜುನ ಎಲ್. ವಿಜ್ಞಾನಿಗಳು (ಮಣ್ಣು ವಿಜ್ಞಾನಿ) ಇವರು ಮೂರು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.










## ವೈಜ್ಞಾನಿಕ ಹಂದಿ ಸಾಕಾಣಿಕೆ

ಮೀನುಗಾರಿಕೆ, ಪಶುಸಂಗೋಪನೆ ಹಾಗೂ ಹೈನುಗಾರಿಕೆ ಸಚಿವಾಲಯ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ, ಭಾರತ ಸರ್ಕಾರ ಇವರ ಪ್ರಾಯೋಜಕತ್ವದಲ್ಲಿ ದಿನಾಂಕ: 27–03–2022 ರಿಂದ 29–03–2022 ರವರೆಗೆ ವೈಜ್ಞಾನಿಕ ಹಂದಿ ಸಾಕಾಣಿಕೆ ತರಬೇತಿ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಆಯೋಜಿಸಲಾಯಿತು.

ಈ ತರಬೇತಿ ಕಾರ್ಯಕ್ರಮವನ್ನು ಪಶುಪಾಲನ ಮತ್ತು ಪಶುವೈದ್ಯ ಸೇವಾ ಇಲಾಖೆ ಹಾಗೂ ಕೃಷಿ ಇಲಾಖೆ, ಸುಳ್ಯ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸದರಿ ತರಭೇತಿ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ. ವೀರಶೆಟ್ಟಿ, ಸಹಾಯಕ ನಿರ್ದೇಶಕರು ಕೃಷಿ ಇಲಾಖೆ ಸುಳ್ಯ ಇವರು ಅಗಮಿಸಿ, ಹಂದಿ ಸಾಕಾಣಿಕೆಯಲ್ಲಿ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ರೈತರು ತಮ್ಮ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳಲು ಸೂಚಿಸಿದರು. ಮೂರು ದಿನಗಳ ಈ ತರಬೇತಿ ಕಾರ್ಯಕ್ರಮದಲ್ಲಿ ಸುಮಾರು 40 ಜನ ರೈತರು ಭಾಗವಹಿಸಿದ್ದು ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ವಿಷಯಗಳಲ್ಲಿ ತರಬೇತಿಯನ್ನು ನೀಡಲಾಯಿತು. ಈ ತರಬೇತಿ ಕಾರ್ಯಕ್ರಮವನ್ನು ಡಾ. ಶಿವಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು, ಐ.ಸಿ.ಎ.ಆರ್, ಕೆ.ವಿ.ಕೆ ಸಂಯೋಜಿಸಿದ್ದು, ಡಾ. ಮಲ್ಲಿಕಾರ್ಜುನ. ಎಲ್, ವಿಜ್ಞಾನಿಗಳು (ಮಣ್ಣು ವಿಜ್ಞಾನಿ) ಇವರು ಮೂರು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.












| | | |
|---|---|---|
| ಸಂಪಾದಕರು | : | ಡಾ. ಟಿ. ಜೆ. ರಮೇಶ |
| ಸಹ ಸಂಪಾದಕರು | : | ಡಾ. ಚೇತನ್ ಎನ್ |
| ಸಹಾಯಕ ಸಂಪಾದಕರು | : | ಡಾ. ಶಿವಕುಮಾರ್ ಆರ್.<br>ಡಾ. ಕೇದಾರನಾಥ<br>ಡಾ. ನವೀನ್ ಕುಮಾರ್ ಬಿ. ಟಿ.<br>ಡಾ. ಮಲ್ಲಿಕಾರ್ಜುನ ಎಲ್.<br>ಡಾ. ರಶ್ಮಿ ಆರ್. |
| ಸಲಹೆ ಮತ್ತು ಮಾರ್ಗದರ್ಶನ | : | ಡಾ. ಎನ್. ಎ. ಪಾಟೀಲ್ |
| ಪುಟ ವಿನ್ಯಾಸ | : | ಶ್ರೀ ಸತೀಶ ನಾಯ್ಕ ಕೆ. |
| ಪ್ರಕಾಶಕರು | : | ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು<br>ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ,<br>ಮಂಗಳೂರು – 576102 |



ಭಾ.ಕೃ.ಅ.ಪ.–ಕೆ.ವಿ.ಕೆ.ದ.ಕ., ಮಂಗಳೂರು ದೂ.ಸಂಖ್ಯೆ : 0824–2431872,
ಮಿಂಚಂಚೆ : kvk.DakshinaKannada@icar.gov.in ವೆಬ್‌ಸೈಟ್:kvkdk.org